# IN THE COURT OF THE ADDL. SENIOR CIVIL JUDGE & JMFC., GUBBI

# **OS - 228/2023**

Witness recalled and duly sworn on : 06.04.2026.

Further examination in chief by Plaintiff :

Further I have produced following documents.

1. Original registered sale deed dated 28.05.1952. It is marked as Ex.P.38.
2. Original registered sale deed dated 18.03.1955. It is marked as Ex.P.39.
3. Original registered sale deed dated 17.04.1960. It is marked as Ex.P.40.
4. C C of Sec.6 (1) Notification dated 01.12.2006 pertaining to land acquisition along with award details. It is marked as Ex.P.41 and P.41 (a) respectively.
5. C C of report of the Village Accountant. It is marked as Ex.P.42.
6. C C of communication made by the Tahasildar, Gubbi dated 25.05.2022. It is marked as Ex.P.43.
7. C C of Office correspondence of the Tahasildar, Gubbi dated 04.06.2022 with endorsement dated 07.06.2022. It is marked as Ex.P.44.

8. C C of communication made by the Tahasildar, Gubbi dated 21.07.2022. It is marked as Ex.P.45.

Hence, I pray to decree the suit.

**Further cross examination by Counsel for Defendant:**

ದಿನಾಂಕಃ 28.05.1952 ರಂದು ಆಗಿರುವ ಕ್ರಯಪತ್ರದಲ್ಲಿ ಹುಚ್ಚ ಹನುಮಯ್ಯನವರ ಹೆಬ್ಬೆಟ್ಟಿನ ಗುರುತು ಇದೆ ಎಂದರೆ ಸರಿ. ಸದರಿ ಹುಚ್ಚಹನುಮಯ್ಯನವರು 1950 ರಲ್ಲಿ ಮರಣ ಹೊಂದಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯಪತ್ರ ನಿಪಿ-38 ರಲ್ಲಿ ನಾವು ಹುಚ್ಚಹನುಮಯ್ಯನವರ ಹೆಬ್ಬೆಟ್ಟಿನ ಗುರುತನ್ನು ಸೃಷ್ಟಿಸಿದ್ದು, ಸದರಿ ಹೆಬ್ಬೆಟ್ಟಿನ ಗುರುತು ಹುಚ್ಚಹನುಮಯ್ಯನವರ ಹೆಬ್ಬೆಟ್ಟಿನ ಗುರುತು ಅಲ್ಲ ಎಂದರೆ ಸರಿ. ನಿಪಿ-39 ಕ್ರಯಪತ್ರ ದಾವಾ ಆಸ್ತಿ ಸರ್ವೆ ನಂ.24 ಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ರೀ ಸರ್ವೆ ಆದ ನಂತರ ಕ್ರಯಪತ್ರದಲ್ಲಿ ಇರುವ ಸರ್ವೆ ನಂ.24, ಸರ್ವೆ ನಂ.224 ಆಗಿರುತ್ತದೆ. ನಿಪಿ-39 ದಾಖಲೆಯು ಸರ್ವೆ ನಂ.223 ಜಮೀನಿಗೆ ಸಂಬಂಧಿಸಿದೆ ಎಂದರೆ ಸರಿಯಲ್ಲ. ನಿಪಿ-40 ಕ್ರಯಪತ್ರ ಸರ್ವೆ ನಂ.223 ಗೆ ಸಂಬಂಧಿಸಿದ್ದು ದಾವಾ ಆಸ್ತಿಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ನಿಪಿ-38 ಮತ್ತು 39 ಕ್ರಯಪತ್ರವನ್ನು ನಮ್ಮ ಅನುಕೂಲಕ್ಕೆ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ನಿಪಿ-40 ರಲ್ಲಿ ಹನುಮಂತಯ್ಯನವರ ಸಹಿಯನ್ನು ಸೃಷ್ಟಿಸಿದ್ದು ಅದರಲ್ಲಿ ಇರುವ ಸಹಿ ಹನುಮಂತಯ್ಯರವರ ಸಹಿ ಅಲ್ಲ ಎಂದರೆ ಸರಿಯಲ್ಲ.

ನಿಪಿ-41 ಮತ್ತು 41 (ಎ) ದಾಖಲೆಯ ಖಾತೆದಾರ ಕಾಲಂ ನಲ್ಲಿ ಹುಚ್ಚ ಬಿನ್ ಹನುಮಯ್ಯ, ಕರೇಹನುಮ ಮತ್ತು ವೆಂಕಟಹನುಮ ಹೆಸರುಗಳು ಇವೆ ಎಂದರೆ ಸರಿ. ಸದರಿ ಹುಚ್ಚ, ಕರೇಹನುಮ ಮತ್ತು ವೆಂಕಟಹನುಮ ಮೂಲ ಮಂಜೂರುದಾರರು ಎಂದರೆ ಸರಿ. ಸದರಿಯವರು ಆದಿ ದ್ರಾವಿಡ ಜನಾಂಗದವರು ಎಂದರೆ ನನಗೆ ಗೊತ್ತಿಲ್ಲ. ನಿಪಿ-42 ವರದಿಯಲ್ಲಿ ಆಸ್ತಿಯನ್ನು ಬಿಡಿಸಿಕೊಳ್ಳಲು ಬಂದ ಜಮೀನಿನಲ್ಲಿ ಇದ್ದ ವ್ಯಕ್ತಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದು ಬೆದರಿಕೆ ಹಾಕಿರುವ ಬಗ್ಗೆ ನಮೂದು ಇದೆ ಎಂದರೆ ನಾವು ಹಾಕಲಿಲ್ಲ ಮತ್ತು ಸದರಿ ಸಮಯದಲ್ಲಿ ಬಹಳಷ್ಟು ಗ್ರಾಮಸ್ಥರು ಇದ್ದ ಕಾರಣ ಸದರಿ ಬೆದರಿಕೆ

ಮಾಹಿತಿ ನನಗೆ ಗೊತ್ತಿಲ್ಲ. ಸದರಿ ವರದಿ ಆಗುವ ಸಮಯದಲ್ಲಿ ನಾವು ನ್ಯಾಯಾಲಯಕ್ಕೆ ಪ್ರಕರಣ ಸಲ್ಲಿಸಿ ಇತ್ಯರ್ಥ ಮಾಡಿಕೊಳ್ಳುತ್ತೆವೆ ಎಂದು ಕಾಲಾವಕಾಶ ಕೇಳಿದ್ದೇವು.

ನಿಪಿ-43 ದಾಖಲೆಯು ಆಗುವ ಸಮಯದಲ್ಲಿ ಮಹಜರ್ ಮಾಡಿದ್ದರು ಎಂದರೆ ಸರಿ. ಸದರಿ ವರದಿಯ ಮಹಜರ್ ಆಗುವ ಕಾಲಕ್ಕೆ ಮಂಜೂರುದಾರರು ಆದಿ ದ್ರಾವಿಡ ಜನಾಂಗಕ್ಕೆ ಸೇರಿರುವವರೆಂದು ಒಪ್ಪಿರುತ್ತೇವೆ ಎಂದರೆ ಅದರ ಬಗ್ಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುತ್ತೇವೆ ಎಂದು ಹೇಳಿದ ನಂತರ ಆಗಿರುವ ವರದಿಗೆ ಸಹಿ ಹಾಕಲು ಹೇಳಿರುವ ಕಾರಣ ಸಹಿ ಮಾಡಿರುತ್ತೇನೆ. ನಿಪಿ-44 ರಲ್ಲಿ ಕರ್ನಾಟಕ ಆಯೋಗದ ಆದೇಶದ ಮೇರೆಗೆ ಉಪವಿಭಾಗಾಧಿಕಾರಿಯು ಮತ್ತು ಜಿಲ್ಲಾಧಿಕಾರಿಗಳ ಆದೇಶದಂತೆ ಸ್ಥಳ ಬಿಡಿಸಿಕೊಡಲು ಬಂದಿದ್ದ ಸಂದರ್ಭದಲ್ಲಿ ನಾವು ಹೇಳಿಕೆ ನೀಡಿದ್ದೇವು ಎಂದರೆ ನ್ಯಾಯಾಲಯದಲ್ಲಿ ಇತ್ಯರ್ಥ ಮಾಡಿಕೊಳ್ಳಲು ಸಮಯ ಕೇಳಿದ್ದೇವು. ನಿಪಿ-45 ದಾಖಲೆಯು ಗುಬ್ಬಿಯ ತಹಶೀಲ್ದಾರ್ ರವರು ನಮ್ಮ ಹೆಸರಿಗೆ ಖಾತೆಯನ್ನು ರದ್ದು ಮಾಡುವ ಬಗ್ಗೆ ಆಗಿರುವ ವರದಿ ಎಂದರೆ ನಮಗೆ ನೋಟಿಸ್ ನೀಡದೆ ಮಾಡಿರುತ್ತಾರೆ.

**Re-examination-Nil.**

(Typed to my dictation in open court)

R.O.I & A.C.

Sd/-

Addl. Senior Civil Judge and
JMFC., Gubbi